## ಹಲ್ಲಿನ ಮಹಿಮೆ



ಇತ್ತೀಚೆಗೆ ನಮ್ಮ ಮನೆಗೆ ಸಂಬಂಧಿಕರೊಬ್ಬರು ಬಂದಿದ್ದರು. ತುಂಬಾ ವಾಚಾಳಿ ಸ್ವಭಾವದ ಹೆಂಗಸು ಅವರು. ಮಾತಿನ ನಡುವೆ, 'ಕಳೆದ ತಿಂಗಳು ವಿಪರೀತ ಹಲ್ಲು ನೋವು ಅಂತ ಡಾಕ್ಟರಲ್ಲಿಗೆ ಹೋಗಿದ್ದೆ ಮರಾಯ್ತಿ. ಅವರು ರೂಟ್ ಕೆನಾಲ್, ಕ್ಯಾಪ್, ಮಣ್ಣು ಮಸಿ ಅಂತ ಎರಡು ಹಲ್ಲಿಗೆ ₹8,000 ಬಿಲ್ಲು ಮಾಡಿಬಿಟ್ಟರು. ಸುಮ್ಮನೆ ವೇಸ್ಟ್ ಅನ್ನಿಸ್ತು. ಅಷ್ಟು ದುಡ್ಡಿಗೆ ಎರಡು ರೇಷ್ಮೆ ಸೀರೇನಾದ್ರೂ ಬರ್ತಿತ್ತು ಕಣೆ' ಎಂದರು. ಈ ಮಾತನ್ನು ಕೇಳಿಸಿಕೊಂಡ ಹಾಸ್ಯ ಸ್ವಭಾವದ ನನ್ನ ಪತಿರಾಯರು, 'ಛೇ! ಅತ್ತೆ ಏನೂಂತ ಮಾತಾಡ್ತೀರ, ₹8,000ದಲ್ಲಿ ಎರಡು ಸೀರೆ ಬರುತ್ತೆ ನಿಜ. ಆದರೆ ಹಲ್ಲುಗಳೇ ಇಲ್ದೇ ರೇಷ್ಮೆ ಸೀರೆ ಉಟ್ಟುಕೊಂಡು ಹೊರಗೆ ಹೋದರೆ ಏನು ಚೆನ್ನಾಗಿರುತ್ತೆ ಹೇಳಿ?' ಅನ್ನಬೇಕೇ!

**ಮಂಜುಳ ಶ್ರೀಧರ ಶಾಸ್ತ್ರೀ**

---



## ನಮ್ಮ ಗೌರವ

ಮಗಳು ನಿಖಿತಾಳಿಗೆ ಮದುವೆ ಗೊತ್ತಾಗಿತ್ತು. ಮದುವೆ ತಯಾರಿ ಬಗ್ಗೆ ಮನೆ ಮಂದಿ ಕೂತು ಮಾತಾಡುತ್ತಿದ್ದೆವು. ವರದಕ್ಷಿಣೆ ಬೇಡವೆಂದ ಬೀಗರಿಗೆ ನಾವು ನಮ್ಮ ಕೈಲಾದ ಗೌರವ ಕೊಟ್ಟು ಸತ್ಕರಿಸಬೇಕು ಎಂಬುದು ಎಲ್ಲರ ಅಭಿಪ್ರಾಯವಾಗಿತ್ತು. ಇದಕ್ಕೆ ನನ್ನ ತಂಗಿ ಹೌದು ಹೌದು, 'ನಮ್ಮ ಗೌರವ ನಾವು ಕೊಡಲೇಬೇಕು' ಎಂದಳು. ಈ ಮಾತನ್ನು ಆಲಿಸಿದ ನನ್ನ ತಂಗಿ ಮಗ ತಕ್ಷಣ ಅವರಮ್ಮನತ್ತ ಬಂದು, 'ಅಕ್ಕನಿಗೆ ಮದುವೆ ಮಾಡುತ್ತಿದ್ದೀರಿ... ಅವಳನ್ನಷ್ಟೆ ಗಂಡನ ಮನೆಗೆ ಕಳಿಸಿ, ನಾನಂತೂ ಹೋಗಲ್ಲ. ನೀನು ಮತ್ತೆ ಮತ್ತೆ ನಮ್ಮ ಗೌರವ ಕೊಡಲೇಬೇಕು... ಗೌರವ ಕೊಡಲೇಬೇಕು... ಅಂತ ಹೇಳಬೇಡ' ಅನ್ನಬೇಕೆ? ನನ್ನ ತಂಗಿ ಮಗನ ಹೆಸರು 'ಗೌರವ' ಆಗಿದ್ದರಿಂದ ಆತನಿಗೆ ತಲೆ ಬಿಸಿಯಾಗಿತ್ತು!

ಕಲೆ: ಗಣೇಶ್ ಆಚಾರ್ಯ

**ಪೂರ್ಣಿಮಾ ಗುರುದೇವ್ ಭಂಡಾರ್ಕರ್**